**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ**
**ಕೆ.ಆರ್.ನಗರ**

**ಒ.ಎಸ್.22/2017**

**ಪಿಡಬ್ಲ್ಯೂ-1**

**ದಿನಾಂಕ 21-11-2019 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

**ಮುಖ್ಯ ವಿಚಾರಣೆ ಶ್ರೀ. ಎಂ ಸಿ ಎಸ್ ವಕೀಲರಿಂದ ವಾದಿ ಪರ ವಕೀಲರು:**

ವಾದಿ ನನ್ನ ತಂದೆಯಾಗಿದ್ದು ಅವರಿಂದ ಸಾಮಾನ್ಯ ಅಧಿಕಾರ ಪತ್ರವನ್ನು ಪಡೆದುಕೊಂಡು ಅವರ ಪರವಾಗಿ ಸಾಕ್ಷಿಯನ್ನು ನುಡಿಯುತ್ತಿದ್ದೇನೆ.

ನನ್ನ ಸಾಕ್ಷಿ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು ಅದರಲ್ಲಿ ಹೇಳಿರುವ ಸಂಗತಿಗಳು ನನಗೆ ತಿಳಿದಿದ್ದು ಹಾಗೂ ಅವು ಸತ್ಯವಾಗಿರುತ್ತವೆ.

ಸಾಮಾನ್ಯ ಅಧಿಕಾರ ಪತ್ರವನ್ನು ನಿಪಿ 1 ಎಂದು, ವೈದ್ಯಾಧಿಕಾರಿ ಇವರು ನೀಡಿದ ಪ್ರಮಾಣ ಪತ್ರವನ್ನು ನಿಪಿ 2 ಎಂದು, ಪ್ರತಿವಾದಿ ಇವರು ಬರೆದು ಕೊಟ್ಟ ಒಂದು ಆನ್ ಡಿಮ್ಯಾಂಡ್ ಪ್ರೋನೋಟನ್ನು ನಿಪಿ 3 ಎಂದು, ಸದರಿ ನಿಪಿ 3 ಕ್ಕೆ ಸಾಕ್ಷಿದಾರರಿವರು ಸಹಿ ಮಾಡಿದ್ದು ಸದರಿ ಸಾಕ್ಷಿಗಳ ಸಹಿಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದರಿಂದ ಅವುಗಳನ್ನು ನಿಪಿ 3 (ಎ) ಹಾಗೂ (ಬಿ) ಎಂದು, ಅದೇ ರೀತಿ ಪ್ರತಿವಾದಿಗಳು ಸದರಿ ಪತ್ರಕ್ಕೆ 2 ಸಹಿಯನ್ನು ಮಾಡಿದ್ದು ಅವುಗಳನ್ನು ನಿಪಿ 3 (ಸಿ) ಹಾಗೂ ನಿಪಿ 3(ಡಿ), (ಇ) ಹಾಗೂ (ಎಫ್) ಎಂದು, ಸದರಿ ಪತ್ರವನ್ನು ವಸಂತ್ ಕುಮಾರ್ ಎಂಬ ಪತ್ರ ಬರಹಗಾರರಿವರು ಬರೆದಿದ್ದು ಅವರ ಸಹಿಯನ್ನು ನಿಪಿ 3 (ಜಿ) ಎಂದು ಗುರುತಿಸಲಾಯಿತು.

ಈ ಹಂತದಲ್ಲಿ ಪ್ರತಿವಾದಿ ಹಾಗೂ ಪರ ವಕೀಲರು ಗೈರು ಹಾಜರಿರುವುದರಿಂದ ಪಾಟೀ ಸವಾಲಿಗೆ ಕಾಲಾವಕಾಶ ನೀಡಲಾಯಿತು.

ಮರುವಿಚಾರಣೆ ಇರುವುದಿಲ್ಲ.

**(ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

ಓ ಹೇ ಕೇ ಸ ಇದೆ ಎಂ

(ಗಾಯತ್ರಿ)
ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,
ಮತ್ತು ಪ್ರದನ್ಯಾದಂ., ಕೆ.ಆರ್.ನಗರ